**ಪ್ರಧಾನ ಸಿವಿಲ್ ನ್ಯಾಯಾಧೀಶರ ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹೆಗ್ಗಡದೇವನಕೋಟೆ, ಮೈಸೂರು ಜಿಲ್ಲೆ.**

**ಸಿ.ಸಿ.ನಂ. 249/2024**

| | | |
|---|---|---|
| ಸಾಕ್ಷಿದಾರರ ಹೆಸರು | : | ವೆಂಕಟಮ್ಮ |
| ಗಂಡನ ಹೆಸರು | : | ತಿಮ್ಮಯ್ಯ |
| ವಯಸ್ಸು | : | 50 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸಸ್ಥಳ | : | ಹೆಗ್ಗಡಾಪುರ ಗ್ರಾಮ, ಹೆಚ್.ಡಿ. ಕೋಟೆ ತಾ. |

**ಸಾಕ್ಷಿಯನ್ನು ದಿನಾಂಕಃ 14.01.2026 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ.ಸ.ಅ. ರವರಿಂದಃ**

ಚಾಸಾ-1 ನನ್ನ ಗಂಡ. ಚಾಸಾ-3 ನನ್ನ ಮಗ. ಚಾಸಾ-6 ರವರ ಪರಿಚಯವಿರುತ್ತದೆ. ಅವರು ನಮ್ಮ ಊರಿನವರು. ನ್ಯಾಯಾಲಯದ ಮುಂದೆ ಇರುವ ಆರೋಪಿತರ ಪರಿಚಯವಿರುತ್ತದೆ.

ಕಳೆದ ಸುಮಾರು ಒಂದೂವರೆ ವರ್ಷದ ಹಿಂದೆ ಮಧ್ಯಾಹ್ನ ಸುಮಾರು 02.30 ಗಂಟೆಯ ಹೊತ್ತಿಗೆ ನಾನು, ನನ್ನ ಗಂಡನಾದ ಚಾಸಾ-1 ಮತ್ತು ನನ್ನ ಮಗನಾದ ಚಾಸಾ-3 ರವರು ಹೆಗ್ಗಡಾಪುರ-ದಾಸಾಪುರ ಗ್ರಾಮದ ಸ.ನಂ. 10 ರ ಜಮೀನಿನಲ್ಲಿ ಕೆಲಸ ಮಾಡುತ್ತಿದ್ದಾಗ ಆರೋಪಿಗಳಿಬ್ಬರೂ ನಮ್ಮ ಜಮೀನಿನಲ್ಲಿ ಕಡ್ಡಿ ತರಿಯಲು ಬಂದಿದ್ದು ಆಗ ನನ್ನ ಗಂಡನಾದ ಚಾಸಾ-1 ರವರು ನಾವು ಮಾಡಿಕೊಂಡಿರುವ ಜಮೀನಿಗೆ ಏಕೆ ಕಡ್ಡಿ ತರಿಯಲು ಬಂದಿದ್ದೀರಿ ಎಂದು ಕೇಳಿದ್ದು ಆಗ ಆರೋಪಿಗಳಿಬ್ಬರು ನಮ್ಮ ಜೊತೆ ಗಲಾಟೆ

ಮಾಡಿ 1 ನೇ ಆರೋಪಿ ದೊಣ್ಣೆಯಿಂದ ನನ್ನ ಗಂಡನಾದ ಚಾಸಾ-1 ರವರ ತಲೆಯ ಎಡಭಾಗಕ್ಕೆ ಹಲ್ಲೆ ಮಾಡಿರುತ್ತಾರೆ. ಅಲ್ಲದೇ 2 ನೇ ಆರೋಪಿ ನನ್ನ ಗಂಡನ ಹೊಟ್ಟೆಯ ಬಲ ಭಾಗದ ಆಪರೇಷನ್ ಆದ ಜಾಗದ ಬಳಿ ಹಿಡಿದು ಎಳೆದಾಡಿ ಪರಚಿರುತ್ತಾಳೆ. ಆಗ ನನ್ನ ಮಗನಾದ ಚಾಸಾ-3 – ಜ್ಯೋತಿಕುಮಾರ್ ಗಲಾಟೆ ಬಿಡಿಸಲು ಬಂದಿದ್ದು ಆಗ ಆತನ ರೂ. 22,000/- ನಗದು ಹಣ ಹಾಗು ಮೊಬೈಲ್ ಕೆಳಗೆ ಬಿದ್ದಿರುತ್ತದೆ. ಆತ ನನ್ನ ಗಂಡನಾದ ಚಾಸಾ-1 ರವರನ್ನು ಎತ್ತಲು ಬಂದಾಗ 1 ನೇ ಆರೋಪಿಯು ಮಚ್ಚಿನಿಂದ ಆತನ ಎಡಕೈಗೆ ಹಲ್ಲೆ ಮಾಡಿರುತ್ತಾನೆ. ಅಲ್ಲದೇ 2 ನೇ ಆರೋಪಿಯು ಕೆಳಗೆ ಬಿದ್ದ ಹಣವನ್ನು ಹಾಗು ಮೊಬೈಲ್ ಅನ್ನು ಎತ್ತಿಕೊಳ್ಳಲು ಬಂದಿದ್ದು ಆಗ ನಾನು ಏಕೆ ಅದನ್ನು ಎತ್ತಿಕೊಳ್ಳುತ್ತಿದ್ದಿ ಎಂದು ಅಡ್ಡ ಬಂದಿದ್ದು ಆಗ 2 ನೇ ಆರೋಪಿ ನನ್ನ ಕುತ್ತಿಗೆಯನ್ನು ಹಿಡಿದು ಎಳೆದು ನನ್ನ ಕರಿಮಣಿ ಸರವನ್ನು ಹರಿದು ಹಾಕಿರುತ್ತಾಳೆ. ಆಗ ಅಕ್ಕ-ಪಕ್ಕದಲ್ಲಿರುವವರು ಯಾರೋ ಬಂದು ಗಲಾಟೆ ಬಿಡಿಸಿ ನಮ್ಮನ್ನು ಹೆಚ್.ಡಿ. ಕೋಟೆ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ದಾಖಲಿಸಿರುತ್ತಾರೆ. ನಂತರ ನನ್ನ ಗಂಡನಾದ ಚಾಸಾ-1 ರವರು ಈ ಬಗ್ಗೆ ಪೋಲೀಸರಿಗೆ ದೂರನ್ನು ನೀಡಿದ್ದು ಪೋಲೀಸರು ನನ್ನನ್ನು ವಿಚಾರಣೆ ಮಾಡಿ ಹೇಳಿಕೆ ದಾಖಲಿಸಿಕೊಂಡಿರುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದಿರುವ **ಮುದ್ದೆಮಾಲು-1** ಮತ್ತು **ಮುದ್ದೆಮಾಲು-2** ಅನ್ನು ನೋಡಿ ಗುರುತಿಸುತ್ತಾರೆ. ಸಾಕ್ಷಿಯು ನ್ಯಾಯಾಲಯದ ಮುಂದೆ ಇರುವ ಆರೋಪಿತರನ್ನು ನೋಡಿ ಗುರುತಿಸುತ್ತಾರೆ.

***(ಈ ಹಂತದಲ್ಲಿ ಸ.ಸ.ಅ. ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಬೇಕೆಂದು ಕೋರಿಕೊಂಡಿದ್ದು, ಕೋರಿಕೆಯನ್ನು ಮನ್ನಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)***

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರವರಿಂದಃ**

1 ನೇ ಆರೋಪಿಯು ನನ್ನ ಗಂಡನಾದ ಚಾಸಾ-1 ರವರಿಗೆ ದೊಣ್ಣೆಯಿಂದ ಯಾವುದೇ ಹಲ್ಲೆ ಮಾಡಿರುವುದಿಲ್ಲ ಬದಲಾಗಿ ಅವರ ಕತ್ತನ್ನು ಹಿಡಿದುಕೊಂಡು ಪರಚಿರುತ್ತಾರೆಂದರೆ ಸರಿಯಲ್ಲ. 2 ನೇ ಆರೋಪಿಯು ಚಪ್ಪಲಿಯಿಂದ ನನ್ನ ಮಗನಾದ ಚಾಸಾ-3 ರವರಿಗೆ ಹಲ್ಲೆ ಮಾಡಿರುತ್ತಾರೆಂದರೆ ಸರಿ. ನನ್ನ ಗಂಡನಾದ ಚಾಸಾ-1 ಮತ್ತು ನನ್ನ ಮಗನಾದ ಚಾಸಾ-3 ರವರಿಗೆ ಆರೋಪಿಗಳು ಹಲ್ಲೆ ಮಾಡುತ್ತಿರುವಾಗ ನಾನು ಬಿಡಿಸಲು ಹೋಗಿದ್ದು ಆಗ ಆರೋಪಿಗಳು ನನ್ನ ಕರಿಮಣಿ ಸರವನ್ನು ಎಳೆದು ಹರಿದಿರುತ್ತಾರೆಂದರೆ ಸರಿ.

**ಪಾಟೀ ಸವಾಲುಃ ಆರೋಪಿಗಳ ಪರ ಶ್ರೀ.ಬಿ.ವಿ.ಎಸ್./ಶ್ರೀ.ಎಂ.ಎನ್.ಆರ್. ವಕೀಲರಿಂದಃ**

ನಾವು ಹೆಗ್ಗಡಾಪುರ-ದಾಸನಪುರ ಗ್ರಾಮದ ಸ.ನಂ. 10 ರಲ್ಲಿ 04 ಎಕರೆ ಜಮೀನಿನಲ್ಲಿ ವ್ಯವಸಾಯ ಮಾಡಿಕೊಂಡಿರುತ್ತೇವೆ. ಸದರಿ ಜಮೀನಿನ ಪಹಣಿ ಪತ್ರಿಕೆ ನನ್ನ ಅತ್ತೆಯ ತಾಯಿ ಬಸಮ್ಮರವರ ಹೆಸರಿನಲ್ಲಿರುತ್ತದೆ. ನಾವು ಸಂಪೂರ್ಣ 04 ಎಕರೆ ಜಮೀನಿನ ಸ್ವಾಧೀನದಲ್ಲಿರುವುದಿಲ್ಲ ಬದಲಾಗಿ ಕೇವಲ 02 ಎಕರೆ ಜಮೀನಿನಲ್ಲಿ ಸ್ವಾಧೀನ ಹೊಂದಿದ್ದು 1989 ನೇ ಇಸವಿಯಲ್ಲಿ ನನ್ನ ಹಾಗು 1 ನೇ ಆರೋಪಿಯ ನಡುವೆ ಮೌಖಿಕ ವಿಭಾಗವಾಗಿದ್ದು ಸದರಿ ವಿಭಾಗದಂತೆ 02 ಎಕರೆ ಜಮೀನು 1 ನೇ ಆರೋಪಿಯ ಭಾಗಕ್ಕೆ ಹೋಗಿರುತ್ತದೆಂದರೆ ಸರಿಯಲ್ಲ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ದಿನಾಂಕಃ 13.05.2024 ರಂದು ಮಧ್ಯಾಹ್ನ 02.30 ಗಂಟೆ ಸಮಯದಲ್ಲಿ ಆರೋಪಿಗಳು ನನಗಾಗಲೀ ಅಥವಾ ಚಾಸಾ-1 ಮತ್ತು ಚಾಸಾ-3 ರವರಿಗಾಗಲೀ ಯಾವುದೇ ಹಲ್ಲೆ

ಮಾಡಿ, ಚಪ್ಪಲಿಯಿಂದ ಹೊಡೆದು ಅವಮಾನ ಮಾಡಿರುವುದಿಲ್ಲ, ಬದಲಾಗಿ ಅದೇ ದಿನ ಬೆಳಿಗ್ಗೆ ನಾನು, ನನ್ನ ಗಂಡ ಹಾಗು ನನ್ನ ಮಕ್ಕಳು ಆರೋಪಿಗಳ ಮೇಲೆ ಗಲಾಟೆ ಮಾಡಿ ಅವರಿಗೆ ಹಲ್ಲೆ ಮಾಡಿದ್ದು ಸದರಿ ಕೇಸಿನಿಂದ ತಪ್ಪಿಸಿಕೊಳ್ಳುವ ಸಲುವಾಗಿ ನನ್ನ ಗಂಡನಾದ ಚಾಸಾ-1ರವರು ಆರೋಪಿಗಳ ವಿರುದ್ದ ನಿ.ಪಿ.-1 ರಂತೆ ಸುಳ್ಳು ದೂರನ್ನು ನೀಡಿದ್ದು ಅದಕ್ಕೆ ಪೂರಕವಾಗಿ ನಾನು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ಪೋಲೀಸರು ನನ್ನನ್ನು ಆಸ್ಪತ್ರೆಯಲ್ಲಿ ಮಾತ್ರ ವಿಚಾರಣೆ ಮಾಡಿರುತ್ತಾರೆ. ನಾನು ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವಂತೆ ಆರೋಪಿಗಳು ಯಾವುದೇ ಚಪ್ಪಲಿ, ದೊಣ್ಣೆ ಅಥವಾ ಮಚ್ಚಿನಿಂದ ಹಲ್ಲೆ ಮಾಡಿರುವುದಿಲ್ಲ ಹಾಗು ನನ್ನ ಕರಿಮಣಿ ಸರವನ್ನು ಹಿಡಿದು ಎಳೆದಾಡಿ ಹರಿದಿರುವುದಿಲ್ಲ ಎಂದರೆ ಸರಿಯಲ್ಲ. ಪೋಲೀಸರು ನನಗೆ ಸೇರಿದ ಯಾವುದೇ ಮಾಂಗಲ್ಯ ಸರವನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ. ಗಲಾಟೆಯ ಸಮಯದಲ್ಲಿ ನನ್ನ ಮಗನ ಜೇಬಿನಿಂದ ಬಿದ್ದ ಮೊಬೈಲ್ ಹಾಗು ನಗದು ಹಣವನ್ನು ಪೋಲೀಸರು ವಶಪಡಿಸಿಕೊಂಡಿರುವುದಿಲ್ಲ. ನಾನು ಪೋಲೀಸರಿಗೆ ಯಾವುದೇ ಹೇಳಿಕೆ ನೀಡಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ: ಇರುವುದಿಲ್ಲ.**

**(ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

**ಓ ಹೇ ಕೇ ಸಾ ಸ ಇ ಒ.,**

**ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,**
**ಹೆಗ್ಗಡದೇವನಕೋಟೆ.**